ನಿಚ್ಚಂ ಪೊಸತು

ಕೃಷ್ಣಮೂರ್ತಿ ಹನೂರು

# ‘ಊರದ ಚೇಳಿನ ಏರದ ಬೇನೆಯಲ್ಲಿ…’

## ಚಾಮರಸನ ಪ್ರಭುಲಿಂಗ ಲೀಲೆ ಕವಿ–ಕಾವ್ಯ ಅವಲೋಕನ

ಹಳಗನ್ನಡ ಸಾಹಿತ್ಯದ ರುಚಿ ಮತ್ತು ಅಂದವನ್ನು ಓದುಗರಿಗೆ ಪರಿಚಯಿಸುವ ಮಾಲಿಕೆ ‘ನಿಚ್ಚಂ ಪೊಸತು’. ಪಳಗಿದ ಓದುಗರಿಗೆ ಹಳಗನ್ನಡದ ಚೆಲುವನ್ನು ನೆನಪು ಮಾಡಿಕೊಡುವ, ಹೊಸ ಓದುಗರಿಗೆ ಅದರ ರುಚಿಯನ್ನು ತಾಕಿಸುವ ಉದ್ದೇಶದ ಈ ಮಾಲಿಕೆ – ಹಳಗನ್ನಡ ಕಾವ್ಯದ ಆಯ್ದ ಪ್ರಖರ ಪದ್ಯಭಾಗಗಳನ್ನಿಟ್ಟುಕೊಂಡು ಅವುಗಳ ಸ್ವಾರಸ್ಯ, ಭಾಷಾವಿಶೇಷ, ಛಂದಸ್ಸು, ರಸಾಸ್ವಾದದ ಸಾಧ್ಯತೆಗಳ ಕುರಿತು ಚರ್ಚಿಸಲಿದೆ.